**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಹರಿಹರ**
**ಓ.ಎಸ್. ನಂ. 12/2019**

**ಡಿ. ಡಬ್ಲ್ಯೂ 1**
**ದಿಃ 22.08.2023**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಎಂ ಎಸ್ ವಕೀಲರಿಂದಃ-**

ಆರ್ ಜೆ ಫೌಂಡ್ರಿ ಎಂದರೆ ಆರ್ ಎಂದರೆ ರಾಣೆಬೆನ್ನೂರು ಜೆ ಎಂದರೆ ಜಲೀಲ್ ಸಾಬ್ ಫೌಂಡ್ರಿ ಎಂದು ಇರುತ್ತದೆ. ವಾದಿ ಬಿರ್ಲಾ ಗ್ರಾಸ್ ಲಿನ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಬಿರ್ಲಾ ಕಂಪನಿಯಿಂದ ವಾದಿಗೆ ಕೊಟ್ಟ ಸೇವಾ ಧೃಡೀಕರಣ ಪತ್ರವಾಗಿದ್ದು ಅದನ್ನು ಸಾಕ್ಷಿಯು ನೋಡಿ ಗುರುತಿಸಿದ್ದರಿಂದ ಅದನ್ನು ಮುಖಾಬುಲೆಯಾಗಿ ನಿಪಿ-20 ಎಂದು ಗುರುತಿಸಲಾಯಿತು. ಗ್ರಾಸಿಂ ಫೌಂಡ್ರಿ ಕಾರ್ಮಿಕರು ಸ್ವಂತ ಫೌಂಡ್ರಿ ತೆಗೆಯಲು ಅಥವಾ ಫೌಂಡ್ರಿಯಲ್ಲಿ ಕೆಲಸ ಮಾಡಲು ಅವಕಾಶವಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ವಾದಿಯು ಫೌಂಡ್ರಿಯನ್ನು ಸ್ಥಾಪನೆ ಮಾಡಿ ನನ್ನ ಹೆಸರಿಗೆ ನೋಂದಣಿ ಮಾಡಿ ಅದನ್ನು ನಿರ್ವಹಿಸಲು ನನಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಡಿ.2 ರಂತೆ ಖಾಲಿ ಜಾಗವನ್ನು ಬಾಡಿಗೆಗೆ ಕೊಟ್ಟಿದ್ದಾರೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಭೂಮಿ ಮತ್ತು ಕಟ್ಟಡವನ್ನು ಬಾಡಿಗೆಗೆ ಕೊಟ್ಟಿದ್ದಾರೆ ಎಂದು ಹೇಳಿದ್ದು, ಸಾಕ್ಷಿಯು ಖಾಲಿ ಜಾಗವನ್ನು ಮಾತ್ರ ಬಾಡಿಗೆಗೆ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಇರುವ ಕಟ್ಟಡ ಅಂದರೆ ಫೌಂಡ್ರಿ ಕಟ್ಟಡ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಕಟ್ಟಡವನ್ನು ನಾನೇ ಕಟ್ಟಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಕಟ್ಟಡ ಕಟ್ಟಿಸಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.

ಸಾಕ್ಷಿಗೆ ನಿಡಿ.2 ಬಾಡಿಗೆ ಕರಾರು ಪತ್ರದ 2 ನೇ ಪುಟದಲ್ಲಿ ಪೆನ್ನಿನಿಂದ ಬರೆದ ದಿನಾಂಕವನ್ನು 12.07. ಎಂದು ಬರೆದಿದ್ದನ್ನು 22.06 ಎಂದು ತಿದ್ದುಪಡಿ ಮಾಡಿದ್ದಾರೆ ಎಂದರೆ ಸರಿಯಲ್ಲ. ನಿಡಿ.2 ರಲ್ಲಿ ದಾವಾ ಸ್ವತ್ತಿನ ಸರ್ವೆ ನಂಬರ್ ಆಗಲೀ ಖಾತೆ ನಂಬರ್ ಆಗಲೀ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚಕ್ಕುಬಂದಿಯೂ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ವಿಸ್ತೀರ್ಣ ಇಲ್ಲ ಎಂದರೆ ಸರಿ. ನಿಡಿ.2 ಬಾಡಿಗೆ ಕರಾರು ಪತ್ರ ಯಾವ ಸ್ವತ್ತಿನ ಕರಾರು ಪತ್ರ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಡಿ.2 ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆ ಎಂದು ಹೇಳಲು ಯಾವುದೇ ಆಧಾರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಪ್ರತಿ ತಿಂಗಳು 1 ಸಾವಿರ ರೂ ಬಾಡಿಗೆ ಹಣ ನೀಡಿದ್ದೇನೆ ಎಂದು ತೋರಿಸಲು ಯಾವುದೇ ಪಾವತಿ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಆ ರೀತಿ ಯಾವುದೇ ದಾಖಲೆಯನ್ನು ಪಡೆದಿಲ್ಲ ಎಂದು ನುಡಿಯುತ್ತಾರೆ. ನಾನು ವಾದಿಗೆ 20 ವರ್ಷಗಳಿಂದ ಸತತವಾಗಿ ಬಾಡಿಗೆ ಪಾವತಿ ಮಾಡಿದ್ದು ಅದಕ್ಕೆ ಸಂಬಂದಪಟ್ಟ ಯಾವುದೇ ದಾಖಲೆ ಇರುವುದಿಲ್ಲ. ವಾದಿ ಮತ್ತು ನನಗೆ ಬಾಡಿಗೆ ಕರಾರು ಪತ್ರವನ್ನು ಬರೆದುಕೊಟ್ಟಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಬಾಡಿಗೆ ಪಾವತಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.2 ದಾಖಲೆ

ನೋಂದಣಿಯಾಗಿರುವುದಿಲ್ಲ ಎಂದರೆ ಸರಿ. ನಿಡಿ.2 ರಲ್ಲಿರುವ ಸಹಿ ವಾದಿಯದ್ದಲ್ಲ ಮತ್ತು ನಿಡಿ.2 ನ್ನು ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಸ್ವಾಧೀನದಲ್ಲಿದೆ ಎಂದು ಹೇಳಿ ದುರ್ಲಾಭ ಪಡೆಯುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.2 ರಲ್ಲಿರುವ ಸಾಕ್ಷಿದಾರರನ್ನು ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ನಿಡಿ.2 ನ್ನು ವಾದಿಯೇ ತಯಾರಿಸಿ ಸಹಿ ಪಡೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.5 ದಿಃ 04.08.1997 ರಲ್ಲಿ ಕೆಇಬಿ ಯಿಂದ ಫೌಂಡ್ರಿಗೆ ವಿದ್ಯುತ್ ಮಂಜೂರಾತಿ ಪಡೆದಿರುವ ಪತ್ರ ಎಂದರೆ ಸರಿ. ಸದರಿ ಪತ್ರದಲ್ಲಿ 9 ಹೆಚ್ ಪಿ +560 ವ್ಯಾಟ್ ವಿದ್ಯುತ್ ಬಳಕೆಗೆ ಮಂಜೂರು ಮಾಡಿದ್ದಾರೆ ಎಂದರೆ ಸರಿ. ನಿಪಿ.6 ದಿಃ 10.11.1997 ರಂದು ಫೌಂಡ್ರಿಗೆ ವಾಯು ಮಾಲಿನ್ಯ ನಿಯಂತ್ರಣ ಮಂಡಳಿ ಯಿಂದ ಅನುಮತಿ ಪಡೆದ ಪತ್ರ ಎಂದರೆ ಸರಿ. ಸದರಿ ಪತ್ರದಲ್ಲಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಫೌಂಡ್ರಿಯಲ್ಲಿರುವ ಒಂದು ಚಿಮುಣಿಯ ಬಗ್ಗೆ ನಮೂದಿಸಿದ್ದಾರೆ ಎಂದರೆ ಸರಿ. ವಾದಿ 1997 ರಲ್ಲಿ ಫೌಂಡ್ರಿಯನ್ನು ಕಟ್ಟಿಸಿದ್ದರು ಎಂದರೆ ಸರಿಯಲ್ಲ.

ನಿಪಿ.7 ನಗರಸಭೆಯಿಂದ ಫೌಂಡ್ರಿಯನ್ನು ನಡೆಸಲು ಪರವಾನಿಗೆ ನವೀಕರಣಗೊಳಿಸಲು ಮಾಡಿಕೊಂಡ ಪತ್ರ ಎಂದರೆ ನನಗೆ ಗೊತ್ತಿಲ್ಲ. ನಿಪಿ.10 ರಲ್ಲಿ 2015 ಜನವರಿಯಿಂದ ವಿದ್ಯುತ್ ಬಳಕೆಯಾಗಿಲ್ಲ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಬಳಕೆ ಮಾಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ವಾಯುಮಾಲಿನ್ಯ ನಿಯಂತ್ರಣ ಮಂಡಳಿ ಯವರು 8 ಫೌಂಡ್ರಿಗಳನ್ನು ನಡೆಸಬಾರದು ಎಂದು ಆದೇಶ ಮಾಡಿದ್ದರು ಆ ಕಾಲಕ್ಕೆ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದ್ದು ನಾವು ಪುನಃ ವಿದ್ಯುತ್ ಪೂರೈಕೆಗೆ ಅರ್ಜಿಯನ್ನು ಸಲ್ಲಿಸಿ ಮರುವಿದ್ಯುತ್ ಪೂರೈಕೆಯನ್ನು ಪಡೆದಿರುತ್ತೇವೆ ನಂತರ ವಾದಿಯು ಅರ್ಜಿಯನ್ನು ಸಲ್ಲಿಸಿ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಿದ್ದರು ಎಂದು ನುಡಿಯುತ್ತಾರೆ. ನಾನು ವಾಯುಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸ್ಥಗಿತಗೊಂಡ ವಿದ್ಯುತ್ ಪೂರೈಕೆಯನ್ನು ಪುನಃ ಪಡೆದಿದ್ದರ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಯು ಅರ್ಜಿಯನ್ನು ಸಲ್ಲಿಸಿ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. 2015 ರಿಂದ ಇಲ್ಲಿಯವರೆಗೂ ಫೌಂಡ್ರಿಯಲ್ಲಿ ಯಂತ್ರಗಳು ಚಾಲನೆಯಲ್ಲಿ ಇಲ್ಲ ಎಂದರೆ ಸರಿ. ಏಕೆಂದರೆ ಫೌಂಡ್ರಿಯು ಮುಚ್ಚಿ ಹೋಗಿರುತ್ತದೆ. 2015 ರ ನಂತರ ಫೌಂಡ್ರಿಯ ವಿದ್ಯುತ್ ಬಿಲ್ ನ್ನು ಕಟ್ಟಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿ. 2014 ರ ನವಂಬರ್ ನಲ್ಲಿ ವಾಯುಮಾಲಿನ್ಯ ಮಂಡಳಿಯವರು ಫೌಂಡ್ರಿಯನ್ನು ಮುಚ್ಚಿದ್ದು ಇಲ್ಲಿಯವರೆಗೂ ಫೌಂಡ್ರಿಯು ಚಾಲನೆ ಮಾಡಿಲ್ಲ ಎಂದರೆ ಸರಿ. ದಿಃ 11.09.2017 ರಂದು ಫೌಂಡ್ರಿಯ ಹಳೆ ಬಾಕಿ 6,850/- ನ್ನು ಪಾವತಿ ಮಾಡಿದ್ದೇನೆ ಎಂದರೆ ನನಗೆ ನೆನಪಿಲ್ಲ. ಆ ಮೂಲಕ ಫೌಂಡ್ರಿಯನ್ನು ಪುನರಾರಂಭಿಸಲು ಪ್ರಯತ್ನ ಪಟ್ಟಿದ್ದೇನೆ ಎಂದರೆ ನನಗೆ ನೆನಪಿಲ್ಲ. ಆ ಕಾಲಕ್ಕೆ ವಾದಿ ಮತ್ತು ನನ್ನ ಮಧ್ಯೆ ಫೌಂಡ್ರಿ ವಿಷಯವಾಗಿ ವಿವಾದವಾಗಿತ್ತು ಎಂದರೆ ಸರಿಯಲ್ಲ. ಆದರೂ ಸಹ 11.09.2019 ರಂದು ದಾವಾ ಸ್ವತ್ತಿನಲ್ಲಿ ಅತಿಕ್ರಮಣ ಪ್ರವೇಶ ಮಾಡಿ ಸ್ವಾಧೀನತೆಯನ್ನು ಪಡೆಯಲು ಪ್ರಯತ್ನ ಪಟ್ಟಿದ್ದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮಂಜೂರು ಮಾಡಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ